5C.R.P.67 sc 115/2021, pw20

| Form No.4 (Civil) Deposition Sheets (R.P.No.57) |
|---|

<u>1 ನೇ ಅಪರ  ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ</u>
<u>ಎಸ್.ಸಿ. ನಂ.  115/2021</u>

<u>ದಿನಾಂಕ ಃ 18.07.2024  ರಂದು ಪ್ರಮಾಣ ವಚನ ಬೋದಿಸಲಾಗಿದೆ.</u>

ಸಿ. ಡಬ್ಲ್ಯೂ:23        ಪಿ. ಡಬ್ಲ್ಯೂ:20

| | |
|---|---|
| ಸಾಕ್ಷಿದಾರರ ಹೆಸರು | ಹೇಮ |
| ಗಂಡನ ಹೆಸರು | ಬಾಲಕೃಷ್ಣ ಜಿ ಆರ್ |
| ವಯಸ್ಸು | 33 ವರ್ಷ |
| ಉದ್ಯೋಗ | ಸಹಾಯಕ ಇಂಜಿನಿಯರ್ |
| ವಾಸ | ಅಂಚೆ  ಪಾಳ್ಯ , ಕುಣಿಗಲ್ ತಾಲ್ಲೂಕು,  ತುಮಕೂರು ಜಿಲ್ಲೆ. |

**<u>ಮುಖ್ಯ ವಿಚಾರಣೆಃ ಮಾನ್ಯ  ಸರ್ಕಾರಿ ಅಭಿಯೋಜಕರಿಂದಃ</u>**

1)  2017 ಡಿಸೆಂಬರ್ 6 ರಿಂದ 2022 ಫೆಬ್ರವರಿ 17 ರವರೆಗೆ ಚಾಮುಂಡೇಶ್ವರಿ  ವಿದ್ಯುತ್ ಸರಬರಾಜು ನಿಗಮ, ನಿಯಮಿತ ಬೆಳ್ಳೂರು ಉಪ ವಿಭಾಗದಲ್ಲಿ ಸಹಾಯಕ ಇಂಜಿನಿಯರ್  ಕಾರ್ಯ ನಿರ್ವಹಿಸಿದ್ದೇನು.

2)  ಈಗ ನನಗೆ  ತೋರಿಸಿದ ಕೋರಿಕೆ  ಪತ್ರದಲ್ಲಿ, ನನ್ನ ಸ್ವೀಕೃತಿ ಸಹಿ ಇದ್ದು, ಸದರಿ ಕೋರಿಕೆ ಪತ್ರವನ್ನು ನಿಪಿ.28 ಎಂದು,   ಹಾಗೂ ಸಹಿಯನ್ನು ನಿಪಿ.28(ಎ) ಎಂದು ಗುರುತಿಸಲಾಯಿತು. ಕೋರಿಕೆ ಪತ್ರದಲ್ಲಿ ದಿಃ 04.06.2020 ರಂದು ರಾತ್ರಿ  10.50 ರಲ್ಲಿ  ಕೃಷ್ಣಾಪುರ ಗ್ರಾಮದಲ್ಲಿ ವಿದ್ಯುತ್ ಸರಬರಾಜು ಇರುವುದರಿ ಬಗ್ಗೆ ವರದಿ ನೀಡಲು  ಕೋರಿದ್ದರು. ಆ ಪ್ರಕಾರ ನಾನು, ದಿಃ  12.10.2020 ರಂದು  ನಾನು ವರದಿಯನ್ನು ನೀಡಿರುತ್ತೇನೆ. ಸದರಿ  ವರದಿಯಲ್ಲಿ, ಸದರಿ  ಕೃಷ್ಣಾಪುರ ಗ್ರಾಮಕ್ಕೆ ಎಫ್11 ಇಂಡಸ್ಟ್ರೀಯಲ್  ಫೀಡರ್ ಎಂಬ ಮಾರ್ಗವು, ವಿದ್ಯುತ್ ಸಂಪರ್ಕ ಕಲಿಃಸಿದ್ದು ಸದರಿ ದಿನಾಂಕದಂದು ಮತ್ತು ಸದರಿ ಸಮಯದಲ್ಲಿ, ಸದರಿ 11ಃಕೆವಿ ಮಾರ್ಗವು  ವಿದ್ಯುತ್  ಸಂಪರ್ಕ  ಇರುತ್ತದೆ  ಎಂದು ತಿಳಿಸಿರುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ, ಕರ್ನಾಟಕ  ವಿದ್ಯುತ್ .ಪ್ರಸರಣ ನಿಯಮಿತ  66/11/ಕೆವಿ ವಿದ್ಯುತ್  ಉಪಕೇಂದ್ರದ ದಿನಚರಿ ಪುಸ್ತಕದ ಪ್ರತಿಯನ್ನು  ಲಗತ್ತಿಸಿರುತ್ತೇನೆ.  ಸದರಿ  ನನ್ನ ವರದಿಯನ್ನು ಈಗ ನೋಡುತ್ತಿದ್ದು , ಇದನ್ನು ನಿಪಿ29 ಎಂದು, ಇದರಲ್ಲಿ  ಇರುವ  ನನ್ನ ಸಹಿಯನ್ನು  ನಿಪಿ.29(ಎ) ಮತ್ತು ಇದಕ್ಕೆ ಲಗತ್ತಿಸಿರುವ ಪ್ರತಿಯನ್ನು ನಿಪಿ.29(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎನ್.ಎನ್. ವಕೀಲರಿಂದ ಃ**

1) ಕೃಷ್ಣಾಪುರ ಗ್ರಾಮದಲ್ಲಿ, ರಾತ್ರಿ10.30 ರಿಂದ 10.50 ಗಂಟೆವರೆಗೆ ವಿದ್ಯುತ್ಚ್ಛಕ್ತಿ ಸರಬರಾಜು ಇತ್ತು ಎನ್ನುವುದರ ಬಗ್ಗೆ ದಾಖಲೆ ಇದೆ. ನಿಪಿ.28 ಕೋರಿಕೆ ಪತ್ರದಲ್ದಿ 2 ನೇ ಪ್ಯಾರಾದಲ್ಲಿ, ತನಿಖಾಧಿಕಾರಿಯವರು, ''ಕೃಷ್ಣಾಪುರ ಗ್ರಾಮದಲ್ಲಿ ಕೆಂಪೇಗೌಡ ಎಂಬುವರ ಮನೆಯಲ್ಲಿ ಬಾಡಿಗೆ ಮಾಡಿಕೊಂಡು ವಾಸವಾಗಿರುವುದಾಗಿ ತಿಳಿಸಿದ್ದು, ಗಾಯಾಳು ವಾಸವಾಗಿರುವ ಕೆಂಪೇಗೌಡ ರವರ ಮನೆಯಲ್ಲಿ ವಿಧ್ಯುತ್ ಸಂಪರ್ಕವಿರುತ್ತದೆಯೇ ಎಂಬ ಬಗ್ಗೆ ವರದಿಯನ್ನು ನೀಡುವಂತೆ,'' ಕೋರಿದ್ದಾರೆ ಎಂದರೆ ಸರಿ. ಹಾಗೂ ನಾನು ಸದರಿ ಕೃಷ್ಣಾಪುರ ಗ್ರಾಮದಲ್ಲಿ ಕೆಂಪೇಗೌಡರ ಬಾಡಿಗೆ ಮನೆಗೆ ವಿಧ್ಯುತ್ ಸಂಪರ್ಕ ಇದೆಯೋ, ಇಲ್ಲವೋ ಎನುವುದರ ಬಗ್ಗೆ ವರದಿಯನ್ನು ನೀಡಿಲ್ಲ ಎಂದರೆ ಸರಿ. ನಾನು ನೀಡಿರುವ ನಿಪಿ.29 ವರದಿಯಲ್ಲಿ, ದಿಃ04.06.2020 ಎಂದು ನಮೂದಿಸಿದ್ದೇನೆ ಹಾಗೂ ಸಮಯವನ್ನು ರಾತ್ರಿ 10.30 ರಿಂದ ರಾತ್ರಿ 10.50 ಎಂಬುವ ಅಂಶವನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯು, ನಮ್ಮಲ್ಲಿ ಸದರಿ 11 ಕೆವಿ ಇಂಡಸ್ಟ್ರಿಯಲ್ ಮಾರ್ಗವು, ಚಾರ್ಜ್ ನಲ್ಲಿರುವ ಕಾರಣ, ಸದರಿ ಫೀಡರ್ ನಲ್ಲಿ, ಯಾವುದೇ ಅಡಚಣೆ ಇಲ್ಲದಿದ್ದರಿಂದ, ದಿನಚರಿ ಪುಸ್ತಕದಲ್ಲಿ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ.

2) ಕೃಷ್ಣಾಪುರ ಗ್ರಾಮಕ್ಕೆ, ದಿಃ04.06.2020 ರಂದು, 11 ಕೆವಿ ಇಂಡಸ್ಟ್ರಿಯಲ್ ಮಾರ್ಗದಲ್ಲಿ ವಿದ್ಯುತ್ ಸರಬರಾಜು ಇತ್ತು ಎನ್ನುವುದರ ಬಗ್ಗೆ ದಾಖಲೆಯನ್ನು ತನಿಖಾಧಿಕಾರಿಗೆ ಕೊಟ್ಟಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು, ತನಿಖಾಧಿಕಾರಿಯು ದಾಖಲೆಯನ್ನು ಕೇಳಿರಲಿಲ್ಲ, ಬರೀ ವಿದ್ಯುತ್ ಸರಬರಾಜು ಇತ್ತಾ, ಇಲ್ಲವಾ ಎನ್ನುವುದರ ಬಗ್ಗೆ ಮಾತ್ರ ಮಾಹಿತಿಯನ್ನು ಕೋರಿದ್ದರು ಎಂದು ಉತ್ತರಿಸುತ್ತಾರೆ. ಕೆಂಪೇಗೌಡರ ಮನೆಯ ಮೀಟರ್ ಆರ್.ಆರ್. ನಂಬರನ್ನು ತನಿಖಾಧಿಕಾರಿಗೆ ಕೊಡುವುದಕ್ಕೆ ನಮಗೆ ತೊಂದರೆ ಇರಲಿಲ್ಲ ಆದರೆ, ನಮ್ಮ ದಾಖಲೆ ಪ್ರಕಾರ ಕೆಂಪೇಗೌಡರ ಹೆಸರಿನಲ್ಲಿ ಯಾವುದೇ ಮೀಟರ್ ಆರ್.ಆರ್ . ನಂಬರ್ ಇರುವುದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ, ಹಾಗೂ ಮುಂದುವರೆದು, ಅವರ ತಂದೆಯ ಹೆಸರಿನಲ್ಲಿ ಇರಬಹುದು ಎನ್ನುತ್ತಾರೆ. ಕೆಂಪೇಗೌಡರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಗಾಯಾಳು ಸತೀಶ್ ರವರು, ಕೃಷ್ಣಾಪುರ ಗ್ರಾಮದಲ್ಲಿ ಕೆಂಪೇಗೌಡರ ಎನ್ನುವವರ ಮನೆಯಲ್ಲಿ ಬಾಡಿಗೆಗೆ ಇರಲಿಲ್ಲ ಹಾಗೂ ಅಲ್ಲಿ ಕೆಂಪೇಗೌಡರವರ ಯಾವುದೇ ಮನೆ ಅಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ನಮ್ಮ ದಾಖಲೆಯ ಪ್ರಕಾರ ಅವರ ಹೆಸರಿನಲ್ಲಿ ಯಾವುದೆ ಮೀಟರ್ ಆರ್ ಆರ್ ನಂಬರ್ ಇಲ್ಲದೇ ಇರುವುದರಿಂದ, ದಾಖಲೆಯನ್ನು ಕೊಡಲು ಬರುವುದಿಲ್ಲ ಎಂದು ನುಡಿಯುತ್ತಾರೆ ಹಾಗೂ ಕೆಂಪೇಗೌಡ ಎಂಬುವವರು ಇದ್ದರೋ, ಇಲ್ಲವೋ ಎನ್ನುವುದರ ಬಗ್ಗೆ ನಮಗೆ ಮಾಹಿತಿ ಇಲ್ಲ.

3) ದಿಃ 04.06.2020 ರಂದು ರಾತ್ರಿ 10.30 ರಿಂದ 10.50 ರವರಗೆ ಕೃಷ್ಣಾಪುರ ಗ್ರಾಮದಲ್ಲಿ ವಿದ್ಯುತ್ ಸರಬರಾಜು ಇಲ್ಲದೇ ಇರುವುದರಿಂದ, ನಾನು ನನ್ನ ವರದಿಯಲ್ಲಿ ಮೇಲಿನ ಸಮಮಯನ್ನು ನಮೂದು ಮಾಡಿಲ್ಲ ಸಾಕ್ಷಿಯು, ವಿದ್ಯುತ್ ಸರಬರಾಜು ಇತ್ತು ಎಂದು ಹೇಳುತ್ತಾರೆ. ಕೃಷ್ಣಾಪುರ ಗ್ರಾಮದಲ್ಲಿ, ಗಾಯಾಳು ಸತೀಶ್ ರವರು, ಕೆಂಪೇಗೌಡರ ಮನೆಯಲ್ಲಿ ಬಾಡಿಗೆಗೆ ವಾಸ ಇಲ್ಲದೇ ಇದ್ದರೂ ಸಹ ತನಿಖಾಧಿಕಾರಿಯವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.